# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಹೆಚ್ಚುವರಿ ನಿರ್ದೇಶಕರು(ನಗರ ಯೋಜನೆ) ರವರ ಕಛೇರಿ,ಮಹಾನಗರ ಪಾಲಿಕೆ,ಎನ್.ಆರ್. ವೃತ್ತ,ಬೆಂಗಳೂರು-02.**

ಸಂಖ್ಯೆ: ಜೆಡಿಟಿಪಿ (ದ)/ಪ್ರಾ.ಪ/ಸನಿ/____/2016-17 ದಿನಾಂಕ: 13-03-2017.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಆಸ್ತಿ ಸಂಖ್ಯೆ 47/2 & 48/3, ನಾಗನಾಥಪುರ ಗ್ರಾಮ, ಬೇಗೂರು ಹೋಬಳಿ, ಬೇಗೂರು ಉಪವಿಭಾಗ, ವಾರ್ಡ್ ಸಂಖ್ಯೆ 191, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯ ಮತ್ತು ವಾಣಿಜ್ಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD South/ 0418/14-15 ದಿನಾಂಕ: 04-03-2016.
2) ಅರ್ಜಿದಾರರ ಮನವಿ ದಿನಾಂಕ: 18-11-2016.
3) ಅಪರ ನಿರ್ದೇಶಕರು, ನಗರ ಯೋಜನೆ ರವರ ಆದೇಶ ದಿನಾಂಕ: 25-02-2017.

*****

ನಾಗನಾಥಪುರ ಗ್ರಾಮ, ಬೇಗೂರು ಹೋಬಳಿ, ಬೇಗೂರು ಉಪವಿಭಾಗ, ವಾರ್ಡ್ ಸಂಖ್ಯೆ 191 ರಲ್ಲಿರುವ ಆಸ್ತಿ ಸಂಖ್ಯೆ 47/2 & 48/3 ಇಲ್ಲಿ ನಿರ್ಮಿಸುತ್ತಿರುವ ತಳ+ನೆಲ+ಮೇಲಿನ 7 ಅಂತಸ್ತುಗಳ 43 ಘಟಕಗಳುಳ್ಳ ವಸತಿ ಸಮುಚ್ಚಯ ಮತ್ತು ವಾಣಿಜ್ಯ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ ಸಂಖ್ಯೆ: BBMP/Addl.Dir/JD South/ 0418/14-15 ದಿನಾಂಕ: 04-03-2016 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ಕಟ್ಟಡದ ಸ್ಥಳವನ್ನು ದಿನಾಂಕ: 17-02-2017 ರಂದು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಸಹಾಯಕ ಅಭಿಯಂತರರವರೊಂದಿಗೆ ಸ್ಥಳ ಪರಿಶೀಲಿಸಿದ್ದು, ವಲಯ ನಿಯಮಾವಳಿಯಂತೆ ಅಗತ್ಯ ನಮೂಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 67,000/- ಗಳನ್ನು ಅರ್ಜಿದಾರರು ರಸೀದಿ ಸಂಖ್ಯೆ: RE-ifms624-TP/000291 ದಿನಾಂಕ: 08-03-2017 ರಂದು ಭರಿಸಿದ್ದು, ಸಂದಾಯಿಸಿ ಕೊಳ್ಳಲಾಗಿದೆ. ವಾಣಿಜ್ಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ಉದ್ಯಾನವನ ಮತ್ತು ಬಯಲುಜಾಗದ ಶುಲ್ಕದ ಬಾಬ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಬದ್ಧರಾಗಿರುವುದಾಗಿ ನೀಡಿರುವ ಮುಚ್ಚಳಿಕೆ ಪತ್ರದಂತೆ ಷರತ್ತನ್ನು ಪಾಲಿಸತಕ್ಕದ್ದು.

13/3/17

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

13/3/17. 13/3/17

ಗೆ,
Smt. Vidya
# 47/2 & 48/3, ನಾಗನಾಥಪುರ ಗ್ರಾಮ,
ಬೇಗೂರು ಹೋಬಳಿ, ಬೇಗೂರು ಉಪವಿಭಾಗ,
ವಾರ್ಡ್ ಸಂಖ್ಯೆ 191, ಬೆಂಗಳೂರು.

4.